ಸಾಕ್ಷಿಯನ್ನು ದಿ: 18.11.2025 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಪಿ.ಡಬ್ಲ್ಯೂ-1

**ಮುಂದುವರೆದ ಪಾಟೀಸವಾಲುಃ- ಪ್ರತಿವಾದಿಗಳ ಪರ ವಕೀಲರಿಂದ:-**

1. ನಾನು ಹಿಂದಿನ ಬಾರಿ ಹೇಳಿದಂತೆ ದಾಖಲೆಗಳನ್ನು ಹಾಜರುಪಡಿಸಲು ತಹಶೀಲ್ದಾರರಿಗೆ ಅರ್ಜಿ ಸಲ್ಲಿಸಿದ್ದೇನೆ. ಸದರಿ ದಾಖಲೆಗಳು ಮೂಲ ದಾಖಲೆಗಳಲ್ಲಿ ಇರುವ ಬಗ್ಗೆ ಪರಿಶೀಲಿಸಿರುವುದಿಲ್ಲ. ನನ್ನ ತಂದೆ ತಾಯಿಗೆ ಅವರ ದತ್ತು ತಂದೆ ತಾಯಿ ಯಾವುದೇ ಧಾನ ಪತ್ರವನ್ನು ಬರೆದುಕೊಟ್ಟಿಲ್ಲ. ನಾನು ಹೇಳಿದಂತೆ ಸದರಿ ಧಾನ ಪತ್ರದ ಪ್ರಕಾರ ಗಂಡು ಮಕ್ಕಳಿಗೆ ಮಾತ್ರ ಆಸ್ತಿಯಲ್ಲಿ ಹಕ್ಕು ಇದೆ ಎನ್ನು ಷರತ್ತು ಕಾನೂನು ಬಾಹಿರವಾಗಿದ್ದು ಹಾಗೂ ಸದರಿ ಷರತ್ತುಗಳು ಇರುವ ಧಾನ ಪತ್ರವು ಊರ್ಜಿತವಲ್ಲ ಎಂದರೆ ಸರಿಯಲ್ಲ.
2. ಯಾವುದೇ ಒಂದು ಮಗುವಿಗೆ ಹಕ್ಕುಗಳನ್ನು ಸದರಿ ಮಗು ಜನಿಸುವ ಪೂರ್ವದಲ್ಲೇ ಕಸಿದುಕೊಳ್ಳುವ ಹಕ್ಕು ಯಾರಿಗೂ ಇಲ್ಲ ಎಂದರೆ ಸರಿಯಲ್ಲ. ಸದರಿ ಧಾನ ಪತ್ರಕ್ಕೆ ಯಾರು ಸಾಕ್ಷಿಯಾಗಿ ಸಹಿ ಮಾಡಿದ್ದಾರೆ ಎಂದರೆ ಸಾಕ್ಷಿಯು ನೋಡಿ ಹೇಳಬೇಕು ಎಂದು ನುಡಿಯುತ್ತಾರೆ. ಸದರಿ ಸಾಕ್ಷಿದಾರರ ವಾರಸುದಾರರ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ 3 ಮತ್ತು 4 ನೇ ಪ್ರತಿವಾದಿಗೂ ಸಮಾನ ಹಕ್ಕು ಇದೆ ಎಂದರೆ ಸರಿಯಲ್ಲ.
3. ದಾವಾ ಷಡ್ಯೂಲ್ 21 ರಿಂದ 28 ಆಸ್ತಿಗಳನ್ನು 1 ನೇ ಪ್ರತಿವಾದಿಯು ಸ್ವಂತ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದಕ್ಕೆ ಸಂಬಂಧಪಟ್ಟ ಪತ್ರಗಳಿಗೆ ನಾನು ಸಾಕ್ಷಿಯಾಗಿ ಸಹಿ ಮಾಡಿಲ್ಲ. ದಾವಾ ಆಸ್ತಿಗಳನ್ನು ಹೊರತು ಪಡಿಸಿ ನಾನು ಬೇರೆ ಆಸ್ತಿಗಳನ್ನು ಖರೀದಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಖರೀದಿ ಮಾಡಿರುವ ಆಸ್ತಿಗಳನ್ನು ಈ ಪ್ರಕರಣದಲ್ಲಿ ಸೇರಿಸಲು ತೊಂದರೆ ಇಲ್ಲ.
4. ದಾವಾ ಷಡ್ಯೂಲ್ 21 ರಿಂದ 28 ಆಸ್ತಿಗಳನ್ನು ಯಾವ ಆದಾಯದಿಂದ ಖರೀದಿ ಮಾಡಿದದ್ದಾರೆ ಎಂದು ನಾನು ವಾದ ಪತ್ರ ಹಾಗೂ ಪ್ರಮಾಣ ಪತ್ರದಲ್ಲಿ ತಿಳಿಸಿಲ್ಲ ಎಂದರೆ ಸರಿಯಲಲ. ಸಾಕ್ಷಿಯು ಮುಂದುವರೆದು ಒಟ್ಟು ಕುಟುಂದಬದ ಅದಯದಿಂದ ಖರಿನೇದಿ ಮಾಡಿದ್ದೇವೆ ಎನ್ನುತ್ತಾರೆ. ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಹಾಜರುಪಡಿಸಿಲ್ಲ. ಸದರಿ ಆಸ್ತಿಂಗಳನ್ನು 2 ನೇ ಪ್ರತಿವಾದಿ ತಮ್ಮ ಸ್ವಂತ ಆದಾಯದಿಂದ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ.

5. ನನ್ನ ತಂದೆ ತಾಯಿ ಬದುಕಿದ್ದಾಗ 3 ಮತ್ತು 4 ನೇ ಪ್ರತಿವಾದಿಯ ಮದುವೆ ಮಾಡಿರುತ್ತಾರೆ ಎಂದರೆ ಸರಿ . ನನ್ನ ತಂದೆ ನಂತರ ನಾನು ಮನೆಯ ಯಜಮಾನಿಕೆಯನ್ನು ನೋಡಿಕೊಳ್ಳುತ್ತಿದ್ದೆ ಎಂದರೆ ಸಾಕ್ಷಿಯು ಎಲ್ಲರೂ ಒಟ್ಟಾಗಿ ನೋಡಿಕೊಳ್ಳುತ್ತಿದೇವು ಎಂದು ನುಡಿಯುತ್ತಾರೆ. ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

6. ದಾವಾ ಷೆಡ್ಯೂಲ್ 18 ಆಸ್ತಿಯಲ್ಲಿ ಪ್ರತಿವಾದಿಯರು ಮರ ಕಡಿದಿದ್ದಾರೆ ಎಂದು ನಾನು ಅವರ ವಿರುದ್ಧ ದೂರನ್ನು ಸಲ್ಲಿಸಿದ್ದೇನೆ. ನನ್ನ ತಂಗಿಯರಿಗೆ ಭಾಗ ಕೊಡಬೇಕಾಗುತ್ತದೆ ಎಂದು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತಿತದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ</u>**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

ಪ್ರಧಾನ ಸಿ.ಜೆ. ಮತ್ತು ಜೆ.ಎಂಎಫ್.ಸಿ
ಮಳವಳ್ಳಿ